ದಿನಾಂಕಃ 13.07.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀಸವಾಲುಃ 1 ಮತ್ತು 2 ನೇ ಪ್ರತಿವಾದಿಯರ ಪರ ವಕೀಲರಿಂದಃ**

ನಾನು ಮಮದಾಪೂರದ ನಿವಾಸಿ ಇರುತ್ತೇನೆ. ಮಮದಾಪೂರದಲ್ಲಿ ನಮ್ಮ ಕುಟುಂಬಕ್ಕೆ 12 ಎಕರೆ ಜಮೀನು ಇದ್ದು, ಅವು ನನ್ನ ತಂದೆಯ ಹೆಸರಿಗೆ ಇರುತ್ತವೆ. ನಾವು 04 ಜನ ಅಣ್ಣತಮ್ಮಂದಿರರು. ಮೂಲ ಪುರುಷ ರಾಯಪ್ಪನು ಮಾಲದಿನ್ನಿ ಗ್ರಾಮದವರು ಇರುತ್ತಾನೆ. ಆತ ಒಕ್ಕಲುತನ ಮಾಡುತ್ತಿದ್ದನು. ಮಾಲದಿನ್ನಿಯ ಯಾವ ಓಣಿಯಲ್ಲಿ ರಾಯಪ್ಪ ವಾಸಿಸುತ್ತಿದ್ದನು ಎಂದರೆ ಸಾಕ್ಷಿಯು ಉಪ್ಪಾರ ಓಣಿಯಲ್ಲ್ಕಿ ವಾಸಿಸುತ್ತಿದ್ದನು ಎಂದು ನುಡಿಯುತ್ತಾರೆ. ಅವರ ಮನೆಯ ಅಕ್ಕಪಕ್ಕದಲ್ಲಿ ಯಾರ ಮನೆಗಳು ಇರುತ್ತವೆ ಎಂದರೆ ಸಾಕ್ಷಿಯು ಬಂಡಿಯವರ ಕುಟುಂಬದವರ ಮನೆಗಳು ಇರುತ್ತವೆ ಎಂದು ನುಡಿಯುತ್ತಾರೆ. ನನಗೆ ರಾಯಪ್ಪನ ಕುಟುಂಬದ ಬಗ್ಗೆ ಏನು ಗೊತ್ತಿರದೇ ಇದ್ದರೂ ಸಹ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ವಾದಿ ಸುವರ್ಣಾ ಇವಳು ನನ್ನ ಗೆಳೆಯ ಮಗಳು ಇರುತ್ತಾಳೆ. ಸುವರ್ಣಾ ಈಗ ಮಸಗುಪ್ಪಿ ಯ ತೋಟದ ಮನೆಯಲ್ಲಿ ವಾಸವಾಗಿರುತ್ತಾಳೆ. ತೋಟದ ಮನೆಯ ನಂಬರ ನನಗೆ ಹೇಳಲು ಆಗುವುದಿಲ್ಲ.

ರಾಯಪ್ಪನ ಕುಟುಂಬದ ವಂಶಾವಳಿ ನನಗೆ ಗೊತ್ತು. ರಾಯಪ್ಪನಿಗೆ ಮಾಲದಿನ್ನಿಯಲ್ಲಿ ಯಾವುದೇ ಮನೆ ಮತ್ತು ಹೊಲ ಇರಲಿಲ್ಲ ಎಂದರೆ ಸರಿಯಲ್ಲ. ರಾಯಪ್ಪನ ಹೆಂಡತಿಯ ಹೆಸರು ಲಕ್ಕವ್ವ. ರಾಯಪ್ಪನ ಹೆಂಡತಿಯ ಹೆಸರು ಶಿವಕ್ಕ ಇರುತ್ತದೆ ಎಂದರೆ ಸಾಕ್ಷಿಯು ಎರಡೂ ಹೆಸರಿನಿಂದ ಕರೆಯುತ್ತಾರೆಂದು ನುಡಿಯುತ್ತಾರೆ. ರಾಯಪ್ಪನಿಗೆ ಒಬ್ಬನೇ ಮಗ ಇರುತ್ತಾನೆ. ಆತನಿಗೆ ಮೂರು ಜನ ಮಕ್ಕಳು ಇದ್ದು, ಇಬ್ಬರೂ ತೀರಿಕೊಂಡಿದ್ದು, ಒಬ್ಬನೇ ಮಗ ಬದುಕಿರುತ್ತಾನೆಂದರೆ

ಸಾಕ್ಷಿಯು ಮಗಳು ಒಬ್ಬಳು ಇದ್ದು, ಅವಳು ತೀರಿಕೊಂಡಿರುತ್ತಾಳೆಂದು ನುಡಿಯುತ್ತಾರೆ.

ಸವಾಲಾಳಪೂಲ ನೋಡಿರುತ್ತೇನೆ. 1ನೇ ಪ್ರತಿವಾದಿಗೆ 54 ಆಸ್ತಿಗಳು ಇರುತ್ತವೆ. ನನಗೆ ಜಮೀನುಗಳ ಚಕ್ಕುಬಂದಿ ನನಗೆ ಗೊತ್ತಿದೆ. 1ನೇ ಪ್ರತಿವಾದಿಗೆ 06 ಜನ ಗಂಡು ಮಕ್ಕಳು ಅವರೆಂದರೆ 1. ಆನಂದ, 2. ರವಿ ಇದ್ದು, ಉಳಿದವರ ಹೆಸರುಗಳು ನೆನಪಿಗೆ ಇರುವುದಿಲ್ಲ. ಪ್ರಸ್ತುತ ದಾವೆಯನ್ನು ಹೊರತುಪಡಿಸಿ ಬೇರೆ ದಾವೆಯ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ದಾವಾ ಆಸ್ತಿಗಳ ನಂಬರಗಳನ್ನು ಹೇಳಬಲ್ಲೆನು. ದಾವಾ ಆಸ್ತಿಗಳ ಪೈಕಿ ಒಟ್ಟು 12 ಹೊಲಗಳು, ಮೂರು ಮನೆಗಳು ಮತ್ತು ಉಳಿದವು ಖುಲ್ಲಾ ಜಾಗೆಗಳು ಇರುತ್ತವೆ. ದಾವಾ ಆಸ್ತಿಗಳಲ್ಲಿ ಯಾವ ಸರ್ವೆ ನಂಬರನಲ್ಲಿ ಎಷ್ಟು ಕ್ಷೇತ್ರ ಇರುತ್ತದೆಂದು ನನಗೆ ಹೇಳಲು ಆಗುವುದಿಲ್ಲ. ಜಮೀನುಗಳನ್ನು ಯಾವಾಗ ಮತ್ತು ಎಷ್ಟು ಮೊತ್ತಕ್ಕೆ ಖರೀದಿ ಮಾಡಿರುತ್ತಾರೆಂದು ನನಗೆ ಹೇಳಲು ಆಗುವುದಿಲ್ಲ. ದಾವಾ ಆಸ್ತಿಗಳೆಲ್ಲವೂ 1ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿಗಳು ಇರುತ್ತವೆ ಎಂದರೆ ಸರಿಯಲ್ಲ.

ರಾಯಪ್ಪ ಮತ್ತು ಆತನ ಹೆಂಡತಿಯ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ಅವರಿಗೆ ಎಷ್ಟು ಜನ ಮಕ್ಕಳು ಇರುತ್ತಾರೆಂದು ನನಗೆ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ಆನಂದನನ್ನು ನಾನು ನೋಡಿರುತ್ತೇನೆ. ನಾನು ಆತನನ್ನು ಕುಡಿತದ ಚಟಕ್ಕೆ ಹಚ್ಚಿರುತ್ತೇನೆಂದರೆ ಸರಿಯಲ್ಲ. ನಾನು ದಾವಾ ಜಮೀನುಗಳನ್ನು ನೋಡಿರುತ್ತೇನೆ ಆದರೆ ಅವುಗಳ ಚಕ್ಕುಬಂದಿ ಹೇಳಲು ಆಗುವುದಿಲ್ಲ. ನಾನು 1 ನೇ ವಾದಿಯ ತಂದೆಯ ಮಾತನ್ನು ಕೇಳಿಕೊಂಡು ಪ್ರಕರಣಕ್ಕೆ ಅನುಕೂಲವಾಗುವಂತೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

1 ನೇ ವಾದಿಯ ತಂದೆಗೆ 6 ರಿಂದ 7 ಎಕರೆ ಜಮೀನು ಇರುತ್ತದೆ. 1 ನೇ ವಾದಿಯ ಗಂಡ ಆತನಿಗೆ ಜಮೀನು ಕೊಡಿಸಿರುತ್ತಾನೆಂದರೆ ಸರಿಯಲ್ಲ. ನನಗೆ ವಾದಿ ಮತುತ ಪ್ರತಿವಾದಿಯರ ಕುಟುಂಬದ ಬಗ್ಗೆ ಹಾಗೂ ದಾವಾ ಆಸ್ತಿಗಳ ಬಗ್ಗೆ ಯಾವುದೇ ಮಾಹಿತಿ ಇರದೇ ಇದ್ದರೂ ಸಹ 1 ನೇ ವಾದಿಯ ತಂದೆಯ ಮಾತನ್ನು ಕೇಳಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲುಃ-3 ರಿಂದ 11 ನೇ ಪ್ರತಿವಾದಿ ಪರ ವಕೀಲರು ಪಾಟೀಸವಾಲಿಗೆ ಸಮಯ ಕೋರಿದ್ದು, ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ ರೀತಿ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ

(ಮಹಾದೇವ ಕಾನಟ್ಟಿ)
1ನೇ ಹೆಚ್ಚುವರಿ ಹಿರಿಯ ದಿವಾಣಿ
ನ್ಯಾಯಾಧೀಶರು, ಗೋಕಾಕ

<u>ಸಾಕ್ಷಿಯ ಸಹಿ</u>